# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 268
2. ಸದಸ್ಯರ ಹೆಸರು : ಶ್ರೀ ಟಿ.ಎ. ಶರವಣ
3. ಉತ್ತರಿಸಬೇಕಾದ ದಿನಾಂಕ : 06.07.2023
4. ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ದಶಕಗಳಿಂದ ನನೆಗುದಿಗೆ ಬಿದ್ದಿರುವ ಮೇಕೆದಾಟು ಯೋಜನೆ ಜಾರಿ ಯಾವ ಹಂತದಲ್ಲಿದೆ; ಈ ಯೋಜನೆ ಕಾರ್ಯರೂಪಕ್ಕೆ ತರಲು ಸರ್ಕಾರ ಹೊಸ ಕ್ರಮಕೈಗೊಂಡಿದೆಯೇ; | • ಮೇಕೆದಾಟು ಸಮತೋಲನಾ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಯ ರೂ.9000.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯನ್ನು ದಿನಾಂಕ:18.01.2019 ರಂದು ಕೇಂದ್ರ ಜಲ ಆಯೋಗಕ್ಕೆ ಅನುಮೋದನೆಗೆ ಸಲ್ಲಿಸಲಾಗಿದೆ.<br>• ಯೋಜನೆಗೆ ಅವಶ್ಯವಿರುವ Environmental Impact Assessment & Environmental Management Plan ವರದಿಗಳನ್ನು ತಯಾರಿಸಲು Terms of Reference ಅರ್ಜಿಯನ್ನು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯಕ್ಕೆ (MoEF & CC) ಈ ಹಿಂದೆ ಸಲ್ಲಿಸಲಾದ ಅರ್ಜಿಯು Delist ಮಾಡಲಾಗಿರುವ ಹಿನ್ನೆಲೆಯಲ್ಲಿ ಅರ್ಜಿಯನ್ನು ಮರುಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ.<br>• ತಮಿಳುನಾಡು ಸರ್ಕಾರವು ಮೇಕೆದಾಟು ಯೋಜನೆಯ ಕುರಿತಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮಿಸ್ಸಲೇನಿಯಸ್ ಅರ್ಜಿ ಸಂ.3127/2018, ಸಿವಿಲ್ ಅರ್ಜಿ ಸಂ.5608/2021, ಮಿಸ್ಸಲೇನಿಯಸ್ ಅರ್ಜಿ ಸಂ.0093/2022, IA ಸಂ.84197/2022 ಹಾಗೂ IA ಸಂ.84201/2022 ಅನ್ನು ದಾಖಲಿಸಿದ್ದು, ಇವುಗಳು ವಿಚಾರಣಾ ಹಂತದಲ್ಲಿರುತ್ತವೆ.<br>• ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ ಅಗತ್ಯ ಅನುಮೋದನೆ ಮತ್ತು ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯದ ಅನುಮತಿಗಾಗಿ ಕೇಂದ್ರ ಸರ್ಕಾರವನ್ನು ಕೋರಲಾಗುತ್ತಿದೆ.<br>• ದಿ:29.06.2023ರಂದು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಯೋಜನೆಯ ಅನುಷ್ಠಾನಕ್ಕಾಗಿ ತೀರುವಳಿಯನ್ನು ನೀಡುವಂತೆ ಕೋರಲಾಗಿದೆ. |
| (ಆ) | ಈ ಯೋಜನೆ ತ್ವರಿತವಾಗಿ ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಸಜ್ಜಾಗಿದೆಯೇ; ಸರ್ಕಾರ ಯಾವ ಕ್ರಮ ಕೈಗೊಂಡಿದೆ; | |
| (ಇ) | ಈ ಯೋಜನೆ ಜಾರಿಗೆ ಯಾರು ತಡೆ ಒಡ್ಡುತ್ತಿದ್ದಾರೆ; ಸೌಹಾರ್ದಯುತವಾಗಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ಸದರಿ ಯೋಜನೆಗೆ ಇರುವ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸಿಕೊಂಡು ಸಕ್ಷಮ ಪ್ರಾಧಿಕಾರಗಳ ತೀರುವಳಿಗಳೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ. |

***ಸಂಖ್ಯೆ: ಜಸಂಇ 40 ಎನ್‌ಎಲ್‌ಎ 2023***

( ಡಿ. ಕೆ. ಶಿವಕುಮಾರ್ )
ಉಪ ಮುಖ್ಯಮಂತ್ರಿಗಳು